ಶ್ರೀ ಎಂ. ವಿ. ಕೃಷ್ಣಪ್ಪ.—ಮೇಕೆ ಹಾಲಿನಲ್ಲಿ ಜಿಡ್ಡು ಜಾಸ್ತಿ ಇರುತ್ತದೆ. ಅದು ಕೆಲವು ಜನ ಗಳಿಗೆ ಹಿಡಿಸುವುದಿಲ್ಲ. ಆದ್ದರಿಂದ ಜನಗಳು ಅದನ್ನು ಕೊಂಡುಕೊಳ್ಳದೆ ಇದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಮಾದಯ್ಯ ಗೌಡ.—ಈಗ ಬೆಂಗಳೂರಿನಲ್ಲಿ ಹಾಲಿನ ನರಬರಾಯಿಯ ಕೇಂದ್ರವನ್ನು ಮಾಡಿರುವಂತೆ ಗ್ರಾಮಾಂತರ ಪ್ರದೇಶಗಳಿಂದ ತರಕಾರಿ ಮತ್ತು ಮೊಟ್ಟೆಗಳನ್ನೂ ತರಿಸಿ ವ್ಯಾಪಾರ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡು ತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೇ ಮೊಟ್ಟೆಗಳನ್ನು ತರಿಸಿ ಮಾರಾಟ ಮಾಡುತ್ತಿದ್ದಾರೆ ಈಗ ಕಬ್ಬನ್ ಪಾರ್ಕಿನಲ್ಲಿ ಮೊಟ್ಟೆಗಳನ್ನು ಮಾರಾಟ ಮಾಡತಕ್ಕ ಒಂದು ಬೂತ್ ಇದೆ. ಅಲ್ಲಿ ಈಗ ಒಂದು ದಿವಸಕ್ಕೆ 5 ಸಾವಿರ ಮೊಟ್ಟೆಗಳ ಮಾರಾಟವಾಗುತ್ತಿವೆ. ಇನ್ನು ತರಕಾರಿಯೆನ್ನು ತರಿಸಿ ಮಾರಾಟ ಮಾಡುವುದೆಂದರೆ ಅದು ಬಹಳ ಚಿಲ್ಲರೆ ಕೆಲಸ. ಅಂಥವುಗಳನ್ನೆಲ್ಲಾ ಮಾಡುವುದಕೆ ಹೋದರೆ ಅದರಲ್ಲಿ ಹೆಚ್ಚು ಕಡಿಮೆಯಾಗುತ್ತದೆ. ಮತ್ತು ತೊಂದರೆಯಾಗುತ್ತದೆ.

Extent of Land under Grape Cultivation in the State.

*Q.—97. Sri C. R. RANGE GOWDA (Magadi).—

Will the Government be pleased to state :—

(*a*) the extent of land under Grape cultivation in the State (Talukwise information my be funished) ;

(*b*) whether they would consider to give licence to prepare Grape Wine out of it ?

A.—Sri H. C. BORAIAH (Parlimentary Secretary to the Minister for Agriculture).—

(*a*) The area under Grape Cultivation in the State is about 9,000 acres. Talukwise information is not readily available.

(*b*) This will be considered by the competent authority, *viz.*, the Excise Commissioner in Mysore, as per rules.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ ನನ್ನ (ಬಿ) ಪ್ರಶ್ನೆಗೆ ಉತ್ತರವಾಗಿ ದ್ರಾಕ್ಷಾರಸವನ್ನು ತಯಾರಿಸಲು ಪರವಾನೆಯನ್ನು ಕೊಡುವ ಬಗ್ಗೆ ನಿಯಮಾವಳಿಗಳ ಮೇರೆಗೆ ಸಂಬಂಧಪಟ್ಟ ಅಧಿ ಕಾರಿಗಳು ಎಂದರೆ ಮೈಸೂರು ರಾಜ್ಯದ ಅಬ್ಕಾರಿ ಕಮೀಷನರು ಪರ್ಯಾಲೋಚಿಸುವರು ಎಂದು ಸರ್ಕಾರದವರು ಹೇಳಿದ್ದಾರೆ, ಇದರಿಂದ ಲೈಸೆನ್ಸ್ ಕೊಡುವುದು ದಿರೇ ಆಗುತ್ತದೆ. ಈಗ ನಮ್ಮ ದೇಶದಲ್ಲಿ ದ್ರಾಕ್ಷಿ ಬೆಳೆ ಬಹಳ ಹೆಚ್ಚಿಗೆ ಆಗುತ್ತಿದೆ. ಅದನ್ನು ಸದ್ವಿನಿಯೋಗ ಮಾಡಿಕೊಳ್ಳಲು ಏನಾ ಧರೂ ಕಾರ್ಯಕ್ರಮವನ್ನು ಕೈಗೊಂಡಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ದ್ರಾಕ್ಷಿ ಹಣ್ಣಿನಿಂದ ವೈನನ್ನು ತಯಾರಿಸಲು ಲೈಸೆನ್ಸಿಗೋಸ್ಕರ ಕೆಲವರು ಅರ್ಜಿಗಳನ್ನು ಹಾಕಿದ್ದಾರೆ. ಆದರೆ ಆ ಬಗ್ಗೆ ಸರ್ಕಾರದವರು ಪ್ರತ್ಯೇಕವಾಗಿ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲು ಆಲೋಚನೆಯನ್ನು ಇಟ್ಟುಕೊಂಡಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಈಗ ದ್ರಾಕ್ಷಾರಸವನ್ನು ತಯಾರಿಸಲು ಲೈಸೆನ್ಸಿಗೋಸ್ಕರ ಯಾರು ಯಾರು ಯಾವಾಗ ಅರ್ಜಿಗಳನ್ನು ಹಾಕಿದ್ದಾರೆಂಬುದನ್ನೆಲ್ಲಾ ಪರಿಶೀಲನೆ ನಡೆಸಿ ಅವು ಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟು ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವಂತೆ ಏನಾದರೂ ಕ್ರಮವನ್ನು ಕೈಗೊಂಡಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಅದಕ್ಕೆ ಸಂಬಂಧಪಟ್ಟಂತಹ ರೂಲ್ಸುಗಳನ್ನು ಸರ್ಕಾರದವರು ತಯಾರು ಮಾಡಿರುತ್ತಾರೆ. 23-1-1964 ರಲ್ಲಿ ರೂಲ್ಸು ತಯಾರು ಮಾಡಿದ್ದೇವೆ. ಅದಕ್ಕೆ ಮುಂಚೆಯೂ ಕೆಲವು ಅರ್ಜಿಗಳು ಬಂದಿವೆ, ಆ ನಂತರವೂ ಕೆಲವು ಅರ್ಜಿಗಳು ಬಂದಿವೆ. ರೂಲ್ಸು ಪ್ರಕಾರ ಅರ್ಜಿಗಳನ್ನು ಹಾಕಬೇಕೆಂದು ಎಲ್ಲರಿಗೂ ತಿಳಿಸಿದ್ದೇವೆ. ಬಂದಿರುವ ಎಲ್ಲ ಅರ್ಜಿಗಳನ್ನೂ ಪರಿಶೀಲನೆ ಮಾಡಬೇಕಾಗುತ್ತದೆ.

Sri G. V. GOWDA.—May I know whether there is any prohibition to issue licence to prepare wines or grape wine ?

ಶ್ರೀ ಎಚ್. ಸಿ. ಬೋರಯ್ಯ.—ಎಕ್ಸೈಜ್ ಕಮೀಷನರು ಕಾಂಪಿಟೆಂಟ್ ಅಥಾರಿಟಿ. ಅವರಿಗೆ ಅಧಿಕಾರ ಕೊಟ್ಟಿದ್ದೇವೆ. ರೂಲ್ಸ್ ಪ್ರಕಾರವಾಗಿ ಅರ್ಜಿಗಳಿದ್ದರೆ ಅವರು ಲೈಸೆನ್ಸ್ ಕೊಡುತ್ತಾರೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಒಂಭತ್ತು ಸಾವಿರ ಎಕರೆಯಲ್ಲಿ ದ್ರಾಕ್ಷಿ ಬೆಳೆಯಾಗುತ್ತಿದೆ ಎಂದು ಹೇಳಿದ್ದಾರೆ. ತಾಲ್ಲೂಕುವಾರು ಅಂಕಿಗಳನ್ನು ಕೇಳಿದರೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಸರ್ವೆ ಮಾಡಿ ಈ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ನಾವು ಸರ್ವೆಮಾಡಿಲ್ಲ. 1960-61ರಲ್ಲಿ ಅಂಕಿ ಅಂಶಗಳ ಇಲಾಖೆಯವರು 1,880 ಎಕರೆಯಲ್ಲಿ ದ್ರಾಕ್ಷಿ ಬೆಳೆಯಾಗುತ್ತಿದೆ ಎಂದು ಅಂಕಿಗಳನ್ನು ಸಂಗ್ರಹ ಮಾಡಿದ್ದರು. ಇತ್ತೀಚೆಗೆ ನಾವು ಕಟಿಂಗ್ಸ್ ಸಪ್ಲೈ ಮಾಡಿರುವ ಆಧಾರದ ಮೇಲೆ ಒಂಭತ್ತು ಸಾವಿರ ಎಕರೆ ಎಂದು ಉತ್ತರ ಕೊಟ್ಟಿದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ.—ದ್ರಾಕ್ಷೆಯನ್ನು ಬೆಳೆಯುವುದಕ್ಕೆ ಉತ್ಕೃಷ್ಟವಾದ ಭೂಮಿ ಯಾವ ಯಾವ ಪ್ರದೇಶದಲ್ಲಿ ಎನ್ನುವುದನ್ನು ತಿಳಿಯುವುದಕ್ಕೆ ಸರ್ವೆ ಮಾಡಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಆ ರೀತಿ ಸರ್ವೆ ನಡೆಸಿಲ್ಲ.

Sri K. LAKKAPPA.—What are the steps the Government has taken to increase the growing of grape crop in the State ?

ಶ್ರೀ ಎಚ್. ಸಿ. ಬೋರಯ್ಯ.—ಹಣ್ಣುಗಳನ್ನು ಬೆಳೆಯುವವರಿಗೆ ಸೌಕರ್ಯಗಳನ್ನು ಒದಗಿಸಲು ಮೂರನೆಯ ಯೋಜನೆಯಲ್ಲಿ 40 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಸೇರಿಸಿದ್ದೇವೆ. ಆ ಬಗ್ಗೆ ರೂಲ್ಸ್ ಮಂಜೂರಾಗಿರತಕ್ಕ ಹಂತದಲ್ಲಿದೆ. ರೂಲ್ಸ್ ಮಂಜೂರಾದ ಕೂಡಲೇ ಬಾವಿ ತೆಗೆಯುವುದಕ್ಕೆ, ತೋಟಗಳನ್ನು ಅಚ್ಚುಕಟ್ಟು ಮಾಡುವುದಕ್ಕೆ ಸಾಲಗಳನ್ನು ಕೊಟ್ಟು ಅವರಿಗೆ ಬೇಕಾದ ಅನುಕೂಲಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಿ ಕೊಡುತ್ತೇವೆ.

ಶ್ರೀ ಕೆ ವಿ. ಬೈರೇಗೌಡ.—ಪ್ರತಿವರ್ಷವೂ ದ್ರಾಕ್ಷಿ ಬೇಸಾಯ ಬೆಂಗಳೂರು ಮತ್ತು ಕೋಲಾರ ತಾಲ್ಲೂಕುಗಳಲ್ಲಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಬಂದಿದೆ.

ಶ್ರೀ ಕೆ. ವಿ. ಬೈರೇಗೌಡ.—ಈಗಾಗಲೇ ಮೈಸೂರು ಫ್ರೂಟ್ ಪ್ರಾಡಕ್ಟ್ಸ್ ಸಂಸ್ಥೆಯವರು ಲೈಸನ್ಸ್ ಬೇಕೆಂದು ಅರ್ಜಿ ಹಾಕಿದ್ದಾರೆ. ಅವರಿಗೆ ಲೈಸನ್ಸ್ ಕೊಟ್ಟಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಅವರು ಅರ್ಜಿ ಕೊಟ್ಟಿದ್ದಾರೆ. ಯಾರಿಗೆ ಲೈಸನ್ಸ್ ಮಂಜೂರು ಮಾಡಿದ್ದಾರೆ ಎನ್ನುವ ವಿಷಯ ನನ್ನ ಮುಂದೆ ಇಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ದ್ರಾಕ್ಷಿ ಬೆಳೆ ಬಹಳ ಜಾಸ್ತಿಯಾಗಿ ಆಗುತ್ತಿದೆ. ಇದು ಬೇಗ ಕೆಟ್ಟು ಹೋಗುವ ಪದಾರ್ಥವಾದ್ದರಿಂದ ರೈತರಿಗೆ ನಷ್ಟವಾಗುತ್ತಿರುವುದನ್ನು ತಪ್ಪಿಸಲು ಒಂದು ಕೋಲ್ಡ್ ಸ್ಟೋರೇಜ್ ಕಟ್ಟಿ ಕಾಫಿ ಬೋರ್ಡಿನವರು ಕಾಫಿಗೆ ರೇಟ್ ಪ್ರೊಟೆಕ್ಷನ್ ಕೊಡುವಂತೆ ಇದಕ್ಕೂ ಆ ಏರ್ಪಾಡು ಮಾಡುವ ವಿಷಯವನ್ನು ಪರಿಶೀಲನೆಯಾಗುತ್ತದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿಷಯವನ್ನು ಪರಿಶೀಲನೆಯಾಗುತ್ತದೆ.

ಶ್ರೀ ಇ. ನಾರಾಯಣ ಗೌಡ.—ದ್ರಾಕ್ಷಾರಸವನ್ನು ತಯಾರು ಮಾಡುವುದಕ್ಕೆ ಕೆಲವು ಅರ್ಜಿಗಳು ಬಂದಿವೆ ಎಂದು ಹೇಳಿದರು. ಇವನ್ನು ವಿಮರ್ಶೆ ಮಾಡಿ ಲೈಸನ್ಸ್ ಕೊಡುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಎಚ್. ಸಿ. ಬೋರಯ್ಯ.—ಇಲ್ಲಿಯವರೆಗೂ ಏಳು ಅರ್ಜಿಗಳು ಬಂದಿವೆ. ಇವನ್ನು ಎಕ್ಸೈಜ್ ಕಮೀಷನರ ಕಡೆಗೆ ಕೊಟ್ಟಿದ್ದೇವೆ. ಅವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದ್ರಾಕ್ಷಾರಸವನ್ನು ತಯಾರು ಮಾಡುವುದಕ್ಕೆ ಇತರರಿಗೆ ಲೈಸನ್ಸ್ ಕೊಡುವುದಕ್ಕೆ ಬದಲಾಗಿ ಸರ್ಕಾರವೇ ತಯಾರು ಮಾಡುವುದಕ್ಕೆ ಏಕೆ ಯೋಚನೆ ಮಾಡಬಾರದು ?

ಶ್ರೀ ಎಚ್. ಸಿ. ಬೋರಯ್ಯ.—ಸರ್ಕಾರ ಆ ರೀತಿ ಇಲ್ಲಿಯವರೆಗೂ ಯೋಚನೆ ಮಾಡಿಲ್ಲ.

ಶ್ರೀ ಜಿ. ಟಿ. ರಂಗಪ್ಪ.—ಅರ್ಜಿಗಳನ್ನು ಎಕ್ಸೈಜ್ ಕಮೀಷನರಿಗೆ ಕಳಿಸಿಕೊಟ್ಟು ಎಷ್ಟು ದಿವಸವಾಯಿತು ?

ಶ್ರೀ ಎಚ್. ಸಿ. ಬೋರಯ್ಯ.—ನಿರ್ದಿಷ್ಟವಾದ ತಾರೀಖುಗಳನ್ನು ಹೇಳುವುದಕ್ಕಾಗುವುದಿಲ್ಲ. ಜನವರಿ 23ನೇ ತಾರೀಖಿಗೆ ರೂಲ್ಸ್ ಪಬ್ಲಿಷ್ ಮಾಡಿದ್ದೇವೆ. ಅದಕ್ಕೆ ಒಂದೆರಡು ತಿಂಗಳು ಮುಂಚೆ ಕೆಲವರು ಅರ್ಜಿ ಹಾಕಿದ್ದಾರೆ, ಅನಂತರವೂ ಕೆಲವರು ಅರ್ಜಿ ಹಾಕಿದ್ದಾರೆ.

ಶ್ರೀ ಎಸ್. ಹುಚ್ಚಮಾಸ್ತಿ ಗೌಡ.—ಅರ್ಜಿ ಹಾಕಿರುವವರಿಗೆ ಎಷ್ಟು ದಿನಗಳಲ್ಲಿ ಲೈಸನ್ಸ್ ಕೊಡುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಎಚ್. ಸಿ. ಬೋರಯ್ಯ.—ನಾನಾಗಲೇ ತಿಳಿಸಿದಂತೆ ನಾವು ರೂಲ್ಸ್ ಮಾಡಿರುತ್ತೇವೆ ಅದನ್ನು ಪಬ್ಲಿಷ್ ಕೂಡ ಮಾಡಿದ್ದೇವೆ. ಅದರ ಪ್ರಕಾರವಾಗಿ ಕಾರ್ಯಕ್ರಮ ತೆಗೆದುಕೊಳ್ಳ ಬೇಕಾಗುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಮ್ಮ ರಾಜ್ಯದಲ್ಲಿ ಬೆಳೆಯುವ ದ್ರಾಕ್ಷೆಹಣ್ಣು ಹುಳಿ ಜಾಸ್ತಿಯಾಗಿರುತ್ತದೆ. ಹುಳಿ ಕಡಮೆ ಮಾಡಲು ಏನಾದರೂ ಸಂಶೋಧನೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಅಂಥ ಯೋಚನೆ ಯಾವುದೂ ಇಲ್ಲ.

Extent of land irrigated by Krishnarajasagar Dam and its channels

*Q.—103. Sri S. RUDRAPPA (Kalgi).—

Will the Government be pleased to state :—

(*a*) the extent of land irrigated by Krishnarajasagar Dam and its channels ;

(*b*) what is the rate of water rate, betterment levy under the above Project ;

(*c*) the total amount collected so far ;

(*d*) the amount outstanding ;

(*e*) the names of districts in which heavy arrears of water rate and betterment levy are outstanding ?

†*A.*—Sri ALUR HANUMANTHAPPA (Deputy Minister, for Minor Irrigation) [on behalf of SRI S. NIJALINGAPPA (Chief Minister)].—

(*a*) 1,16,617 acres ;

(*b*) Water rate : Rs. 10 per acre ;
Betterment levy : Rs. 100 to Rs. 150 per acre.

(*c*) Water rate : Rs. 1,85,15,250-67 ;
Contribution : Rs. 1,21,81,976-95.

(*d*) Water rate : Rs. 19,74,299-00 ;
Contribution Rs. 6,53,180-62.

(*e*) Mandya and Mysore Districts.

Sri S. RUDRAPPA.—With reference to (*d*), may I know since how many years the amount has been outstanding ?

† Sri ALUR HANUMANTHAPPA.—I cannot say off-hand. I have furnished the amount outstanding. If the Hon'ble Member wants more details, I will furnish the details.

Sri S. RUDRAPPA.—What are the special measures taken by the Government to recover the outstanding amount ?

Sri ALUR HANUMANTHAPPA.—The Revenue authorities will take necessary steps to recover the arrears due with regard to the water rate and contribution. Sometimes, they take coersive steps also.

Mr. SPEAKER.—He is not asking for the procedure that might be followed. He wants to know the measures taken by the Government to recover the outstanding amount. If the Government have not taken any steps, they may say so. If the Government have taken any steps they can furnish the details.